ಒ.ಎಸ್.ನಂ. 38/2023 ಡಿಡಬ್ಲ್ಯೂ -2

(ಇಂದು ದಿನಾಂಕಃ17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ವಾದಿ ಪರ ಶ್ರೀ SPR ವಕೀಲರಿಂದಃ**

ನಾವು ಮೂರು ಜನ ಸಹೋದರಿಯರು ಮತ್ತು ಒಬ್ಬ ಅಣ್ಣ ಇರುತ್ತಾನೆ. ನನ್ನ ಶಿಕ್ಷಣದ ವೆಚ್ಚವನ್ನು ನನ್ನ ಅಕ್ಕ ವಾದಿ ಮತ್ತು ಆಕೆಯ ಗಂಡ ಬರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಬಿ.ಸಿ.ಎಂ ಹಾಸ್ಟೆಲ್ ನಲ್ಲಿ ಇದ್ದು ಶಿಕ್ಷಣವನ್ನು ಪೂರೈಸಿರುತ್ತೇನೆ. ನನ್ನ ಶಿಕ್ಷಣದ ವೆಚ್ಚವನ್ನು ವಾದಿಯು ಪೂರೈಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಶಿಕ್ಷಣದ ವೆಚ್ಚವನ್ನು ಪೂರೈಸಿರುತ್ತಾರೆ. ನನ್ನ ಅಕ್ಕ ಭಾರತಿಯ ಮದುವೆಯ ವೆಚ್ಚವನ್ನು ವಾದಿ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಅಕ್ಕ ನಿರ್ಮಲ ಮತ್ತು ಆಕೆಯ ಗಂಡ ಪ್ರೀತಿಸಿ ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಅವರ ಮದುವೆಯ ವೆಚ್ಚವನ್ನು ನನ್ನ ತಂದೆ ಪೂರೈಸಿರುತ್ತಾರೆ. ಅವರ ಮದುವೆ ಕೋಡಂಗಲ್‌ನ ವೆಂಕಟೇಶ್ವರ ದೇವಸ್ಥಾನದಲ್ಲಿ ನೆರವೇರಿರುತ್ತದೆ. ಅವರ ಮದುವೆಯ ವೆಚ್ಚವನ್ನು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ. ನನ್ನ ತಂದೆ ಅವಿದ್ಯಾವಂತ ಆಗಿದ್ದರಿಂದ ಹಾಜರು ಪಡಿಸಿಲ್ಲ. ನಾನು ಅವರ ಮದುವೆಯ ಕಾಲಕ್ಕೆ ಡಿಗ್ರಿ ಪಡೆದಿದ್ದೆ ಎಂದರೆ ಸರಿಯಲ್ಲ. ಆಗ ನಾನು 4 ಅಥವಾ 5 ನೇ ತರಗತಿಯಲ್ಲಿ ಓದುತ್ತಿದ್ದೆ.

ದಾವಾ ಆಸ್ತಿಯು ನಮ್ಮ ಹಿರಿಯರ ಆಸ್ತಿ ಎಂದರೆ ಸರಿ, ಅದು ನನ್ನ ತಾತನ ಆಸ್ತಿ ಇರುತ್ತದೆ. ದಾವಾ ಆಸ್ತಿಗೆ ನನ್ನ ತಂದೆಗೆ ಹುಟ್ಟಿದ ಎಲ್ಲರೂ ಜಂಟಿ ವಾರಸುದಾರರು ಇರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಇಲ್ಲಿಯವರೆಗೆ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿದ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.